ಐದನೇ ಪುಣ್ಯ

ಚಿ।। ಸಚ್ಚಿನ್. ಎ
(04.09.1992–24.0
ನೀವು ನಮ್ಮನ್ನಗಲಿ ಶಿವಾಧೀನರಾ
ವರ್ಷವಾಯಿತು. ಪರಮಾತ್ಮ ತಮ್ಮ ಆ
ನೀಡಲೆಂದು ಪ್ರಾರ್ಥಿ
ಸದಾ ನಿಮ್ಮ ಸ್ಮರಣೆ
ತಂದೆ–ಮಲ್ಲಿಕಾರ್ಜುನಯ್ಯ, ತಾಯಿ–
ದೊಡ್ಡಪ್ಪ, ದೊಡ್ಡಮ್ಮ, ಅಣ್ಣ–ಅಕ್ಕಂದಿ
ಮೊಬೈಲ್: 9845227279

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

(CIN: U04010KA2002SGC030438)

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಆರ್ಥಿಕ ವರ್ಷ–24ರ ಅನ್ವಯದಂತೆ ವಿದ್ಯುತ್ ದರ ಪರಿಷ್ಕರಣೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿದ್ಯುಚ್ಛಕ್ತಿ ಕಾಯಿದೆ, ಪರಿಚ್ಛೇದ 62, 64 ಮತ್ತು ಇತರೆ ನಿಯಮಾನುಸಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 12.05.2023 ರಂದು ಆರ್ಥಿಕ ವರ್ಷ–24ಕ್ಕೆ ವಿದ್ಯುತ್ ದರಗಳನ್ನು ಪರಿಷ್ಕರಿಸಿದೆ.

ಸದರಿ ವಿದ್ಯುತ್ ದರ ಪರಿಷ್ಕರಣೆಯ ಮುಖ್ಯಾಂಶಗಳು:

- ಜಕಾತಿ ಆದೇಶ–2023ರ ಪರಿಷ್ಕೃತ ದರಗಳು, 1ನೇ ಏಪ್ರಿಲ್ 2023 ಅಥವಾ ಅದರ ನಂತರದ ಮೊದಲ ಮೀಟರ್ ಓದುವ ದಿನಾಂಕದಿಂದ ಬಳಕೆ ಮಾಡುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತದೆ.
- ಎಲ್‌ಟಿ ಮತ್ತು ಎಚ್‌ಟಿ ವರ್ಗದ ಎಲ್ಲಾ ಪ್ರವರ್ಗಗಳಿಗೆ ಪ್ರತಿ ಯೂನಿಟ್‌ಗೆ 70 ಪೈಸೆ ಜಕಾತಿ ದರವನ್ನು ಹೆಚ್ಚಿಸಲಾಗಿದೆ.
- 70 ಪೈಸೆ ಹೆಚ್ಚಳದಲ್ಲಿ 57 ಪೈಸೆಯನ್ನು ನಿಗದಿತ ಶುಲ್ಕಗಳ ಮೂಲಕ ವಸೂಲಿ ಮಾಡಲಾಗುತ್ತದೆ ಹಾಗೂ ಉಳಿದ 13 ಪೈಸೆಯನ್ನು ವಿದ್ಯುತ್ ಬಳಕೆ ಶುಲ್ಕವಾಗಿ ವಸೂಲಿ ಮಾಡಲಾಗುತ್ತದೆ.
- ಒಟ್ಟಾರೆ ಜಕಾತಿ ಹೆಚ್ಚಳವು ಶೇ. 7.84% ರಷ್ಟಿರುತ್ತದೆ.
- ಆಯೋಗವು, ಕೈಗಾರಿಕೆಗಳು ಮತ್ತು ವಾಣಿಜ್ಯ ಸ್ಥಾವರಗಳು ಹೆಚ್ಚು ವಿದ್ಯುತ್ ಬಳಸುವುದನ್ನು ಉತ್ತೇಜಿಸಲು, ರಿಯಾಯಿತಿ ಇಂಧನ ದರ ಯೋಜನೆ (DERS) ಅಡಿಯಲ್ಲಿ ಪ್ರತಿ ಯೂನಿಟ್‌ಗೆ ರೂ.6.00 ಇದ್ದ ವಿದ್ಯುತ್ ಬಳಕೆ ಶುಲ್ಕವನ್ನು ರೂ.5.00 ಕ್ಕೆ ಇಳಿಸಿ ಅನುಮೋದಿಸಿದೆ. ಹೆಚ್.ಟಿ. ಗ್ರಾಹಕರಿಗೆ ಅನ್ವಯವಾಗುತ್ತಿದ್ದ ಈ ಯೋಜನೆಯನ್ನು ಈಗ 50 ಕಿ.ವ್ಯಾ. ಮತ್ತು ಅದಕ್ಕಿಂತ ಹೆಚ್ಚಿನ ಲೋಡ್ ಮಂಜೂರಾತಿ ಹೊಂದಿರುವ ಎಲ್.ಟಿ. ಕೈಗಾರಿಕಾ (ಎಲ್‌ಟಿ–5) ಮತ್ತು ವಾಣಿಜ್ಯ (ಎಲ್‌ಟಿ–3) ಸ್ಥಾವರಗಳಿಗೆ ವಿಸ್ತರಿಸಲಾಗಿದೆ.
- ಹೆಚ್.ಟಿ. ಗ್ರಾಹಕರಿಗೆ ಅನ್ವಯವಾಗುತ್ತಿದ್ದ ವಿಶೇಷ ಪ್ರೋತ್ಸಾಹ ಯೋಜನೆ (SIS) ಯನ್ನು ಮುಂದಿನ ಆದೇಶದವರೆಗೂ ವಿಸ್ತರಿಸಲಾಗಿದೆ.
- ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಉತ್ತೇಜಿಸಲು, ಇವಿ ಸ್ಟೇಷನ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.5.00 ಇದ್ದ ವಿದ್ಯುತ್ ಬಳಕೆ ಶುಲ್ಕವನ್ನು ಪ್ರತಿ ಯೂನಿಟ್‌ಗೆ ರೂ.4.50ಕ್ಕೆ ಇಳಿಸಲಾಗಿದೆ.
- ರಾಜ್ಯದಲ್ಲಿ ದತ್ತಾಂಶ ಕೇಂದ್ರಗಳ ಸ್ಥಾಪನೆ (ಡಾಟಾ ಸೆಂಟರ್) ಅನ್ನು ಉತ್ತೇಜಿಸಲು, ಕೈಗಾರಿಕಾ ದರವನ್ನು ದತ್ತಾಂಶ ಕೇಂದ್ರಗಳಿಗೂ ವಿಸ್ತರಿಸಲಾಗಿದೆ.
- ಸೂಕ್ಷ್ಮಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ (LT-5) (ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ) ವರ್ಗಕ್ಕೆ ನೀಡುತ್ತಿದ್ದ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 50 ಪೈಸೆ ರಿಯಾಯಿತಿಯನ್ನು ಅಂದರೆ ಆ.ವ–24 ಕ್ಕೆ ಮುಂದಿನ ಆದೇಶದವರೆಗೆ ಮುಂದುವರಿಸಲಾಗಿದೆ.
- ದರ ರಚನೆ (ಟಾರಿಫ್ ಡಿಸೈನ್)ಯನ್ನು ತರ್ಕಬದ್ಧ ಮತ್ತು ಸರಳಗೊಳಿಸುವ ಸಲುವಾಗಿ, ನಗರ ಮತ್ತು ಗ್ರಾಮೀಣ ಪ್ರವರ್ಗಗಳನ್ನು ಒಂದೇ ಪ್ರವರ್ಗಕ್ಕೆ ವಿಲೀನಗೊಳಿಸಲಾಗಿದೆ ಹಾಗೂ ಎಲ್ಲಾ ಗ್ರಾಮೀಣ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಅನುಮತಿಸಲಾಗಿದೆ.
- ಹೆಚ್.ಟಿ. ಕೈಗಾರಿಕೆಗಳು ಮತ್ತು ವಾಣಿಜ್ಯ ಗ್ರಾಹಕರಿಗೆ ಅವರ ಆಯ್ಕೆಯಂತೆ, ಅನ್ವಯವಾಗುವ ವಿದ್ಯುತ್ ದರಕ್ಕಿಂತ ಪ್ರತಿ ಯೂನಿಟ್ಟಿಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರಿಸಲಾಗಿದೆ.
- ಬಿ.ಎಂ.ಆರ್.ಸಿ.ಎಲ್. ಮತ್ತು ರೈಲ್ವೆ ಟ್ರಾಕ್ಷನ್‌ಗಳಿಗೆ ರಿಯಾಯಿತಿ ದರವನ್ನು ವಿಸ್ತರಿಸಲಾಗಿದೆ.
- ದರದ ತರ್ಕಬದ್ಧತೆಯ ಭಾಗವಾಗಿ ಎಲ್.ಟಿ. ಕೈಗಾರಿಕಾ ಗ್ರಾಹಕರ ದರವನ್ನು ಹೊರತುಪಡಿಸಿ, ಎಲ್ಲಾ ಎಲ್.ಟಿ. ಪ್ರವರ್ಗಗಳಿಗೆ ಸಂಬಂಧಿಸಿದಂತೆ ಟೆಲಿಸ್ಕೋಪಿಕ್ ಅಲ್ಲದ (ನಾನ್–ಟೆಲಿಸ್ಕೋಪಿಕ್) ದರದ ಸ್ಲ್ಯಾಬ್‌ಗಳನ್ನು ಪರಿಚಯಿಸಲಾಗಿದೆ.
- ವಿವರವಾದ ಜಕಾತಿ ಆದೇಶವು ಕವಿನಿ ಆಯೋಗದ ಜಾಲತಾಣದ ಈ ಕೆಳಗಿನ ಲಿಂಕ್‌ನಲ್ಲಿ ಲಭ್ಯವಿರುತ್ತದೆ.
  https://kerc.karnataka.gov.in/309/_gallery_/en

ಸಹಿ/- ನಿರ್ದೇಶಕರು (ಹಣಕಾಸು), ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912 ಟೋಲ್ ಫ್ರೀ ಮತ್ತು ಮೊಬೈಲ್ APP Download ಮಾಡಿಕೊಳ್ಳಿ

ವ್ಹೀಲಿಂಗ್ ಮಾಡುತ್ತಿದ್ದ ಅಪ್ರಾಪ್ತನ ವಿಚಾರಣೆ

ಬೆಂಗಳೂರು: ಅಪಾಯಕಾರಿ ವ್ಹೀಲಿಂಗ್ ಮಾಡುತ್ತಿದ್ದ ಅಪ್ರಾಪ್ತನನ್ನು ತಲಘಟ್ಟಪುರ ಸಂಚಾರ ಠಾಣಾ ಪೊಲೀಸರು ವಶಕ್ಕೆ ಪಡೆದು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿದ್ದಾರೆ. ಅಪ್ರಾಪ್ತ ಬಾಲಕ ಭಾನುವಾರ ಡಿಯೋ ಸ್ಕೂಟರ್‌ನಲ್ಲಿ ಮತ್ತೊಬ್ಬ ಸವಾರನನ್ನು ಕೂರಿಸಿಕೊಂಡು ಬನಶಂಕರಿ 80 ಅಡಿ ರಸ್ತೆಯಲ್ಲಿ ವ್ಹೀಲಿಂಗ್ ಮಾಡುತ್ತಿದ್ದ. ಇದರ ವಿಡಿಯೋವನ್ನು ಸೆರೆ ಹಿಡಿದ ಸಾರ್ವಜನಿಕರೊಬ್ಬರು ಸಂಚಾರ ಪೊಲೀಸರ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿದ್ದರು. ವಾಹನದ ನಂಬರ್ ಆಧರಿಸಿ ಆತನ ಮನೆ ಪತ್ತೆ ಮಾಡಲಾಯಿತು. ಆತ ಅಲ್ಲಿ ಇರಲಿಲ್ಲ. ಮತ್ತೊಂದು ವಿಳಾಸದಲ್ಲಿದ್ದ ಅಪ್ರಾಪ್ತನನ್ನು ಪತ್ತೆಹಚ್ಚಿವಾಹನ ಜಪ್ತಿ ಮಾಡಲಾಗಿದೆ. ಮತ್ತೊಬ್ಬ ನಿಗಾಗಿ ಶೋಧ ನಡೆದಿದೆ

ದಂಪತಿಗೆ ಇರಿತ

ನೆಲಮಂಗಲ: ಕುಡಿದ ಅಮಲಿನಲ್ಲಿ ವ್ಯಕ್ತಿಯೊಬ್ಬ ದಂಪತಿಗೆ ಚಾಕುವಿನಿಂದ ಕುತ್ತಿಗೆ ಭಾಗಕ್ಕೆ ಇರಿದು ಪರಾರಿಯಾಗಿದ್ದಾನೆ. ಸ್ಥಳೀಯ ನಿವಾಸಿ ದೇವರಾಜು (33), ನಗೀನಾ(31) ಗಾಯಾಳು. ಸುರೇಂದ್ರ (35) ಆರೋಪಿ. ಸುರೇಂದ್ರ- ದೇವರಾಜು ನಡುವೆ ಕ್ಷುಲ್ಲಕ ಕಾರಣಕ್ಕೆ ಶುರುವಾದ ಜಗಳ ಅತಿರೇಕಕ್ಕೆ ಹೋಗಿಕೈಕೈ ಮಿಲಾಯಿಸಿದ್ದಾರೆ. ನಗೀನಾ ಜಗಳ ಬಿಡಿಸಿದ್ದಾಳೆ. ಆಗ ಸುರೇಂದ್ರ ಮನೆಗೆ ಹೋಗಿ ಚಾಕು ತಂದು ಇಬ್ಬರಿಗೂ ಚುಚ್ಚಿ ಪರಾರಿಯಾಗಿದ್ದಾನೆ.